

# ಫ್ಯಾಷನ್‌ಪ್ರಿಯೆ ಕರೀನಾ

ಕರೀನಾ ಕಪೂರ್‌ಗೆ 40 ತುಂಬಿದ್ದು ಬಾಲಿವುಡ್‌ನಲ್ಲಿ ದೊಡ್ಡ ಸುದ್ದಿಯೇನೂ ಆಗಲಿಲ್ಲ. ಕೊರೊನಾ ಏಟಿನಿಂದ ಇನ್ನೂ ಚೇತರಿಕೆ ಕಂಡಿಲ್ಲವಾದ್ದರಿಂದ ಹಾಗೂ ಇಡೀ ಬಾಲಿವುಡ್ ಡ್ರಗ್ಸ್ ಸುದ್ದಿಯ ಹಿಂದೆ ಬಿದ್ದಿರುವುದರಿಂದ ಇದು ಸಹಜವೇ. ಆದರೆ ಕರೀನಾ ಮಾತ್ರ ತಣ್ಣಗೆ ಇನ್‌ಸ್ಟಾಗ್ರಾಮ್‌ನಲ್ಲಿ ತನ್ನ ಬರ್ತ್‌ಡೇ ಫೋಟೊಗಳನ್ನು ಅಪ್‌ಲೋಡ್ ಮಾಡಿ ಖುಷಿ ಪಟ್ಟುಕೊಂಡಿದ್ದಾರೆ.

ಎರಡನೆ ಮಗುವಿನ ತಾಯಿಯಾಗುವ ಸಿದ್ಧತೆಯಲ್ಲಿರುವ ಕರೀನಾ ಈ ಮಧ್ಯೆ ಫ್ಯಾಷನ್ ಪ್ರಜ್ಞೆ ಪ್ರದರ್ಶಿಸುವುದನ್ನೂ ಮರೆತಿಲ್ಲ. ಗರ್ಭಿಣಿಯರಿಗೇ ಪ್ರತ್ಯೇಕವಾದಂತಹ ಫ್ಯಾಷನ್ ಉಡುಪುಗಳಿವೆ ಎಂದು ನಂಬಿರುವ ಕರೀನಾ ಅದಕ್ಕೆ ತಕ್ಕಂತೆ ಪ್ರತಿದಿನವೂ ಹೊಸ ಹೊಸ ಫ್ಯಾಷನ್ ಡಿಸೈನ್ ಬಟ್ಟೆಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ವಿಶೇಷ. ಮೂರು ವರ್ಷಗಳ ಹಿಂದೆ ಮೊದಲ ಮಗುವಿನ ಆಗಮನವನ್ನು ಘೋಷಿಸಿದಾಗಲೂ ಕರೀನಾ ಗರ್ಭಿಣಿ ಮಹಿಳೆಯರ ಫ್ಯಾಷನ್ ಉಡುಪುಗಳ ಬಗ್ಗೆ ಮಾತನಾಡಿದ್ದುಂಟು. ಹಾಗೆ ನೋಡಿದರೆ, ಬಾಲಿವುಡ್‌ನಲ್ಲಿ ಗರ್ಭಿಣಿಯರ ಫ್ಯಾಷನ್ ಬಗ್ಗೆ ಮಾತನಾಡಿದ ಮೊದಲಿಗಳು ಆಕೆ ಎನ್ನಲಡ್ಡಿಯಿಲ್ಲ.

ಸಿನಿಮಾಗಳಿಗೆ ಸಂಬಂಧಿಸಿದಂತೆ ಕರೀನಾ ಸದ್ಯಕ್ಕೆ ಅಮೀರ್ ಖಾನ್ ಅಭಿನಯದ 'ಲಾಲ್‌ಸಿಂಗ್ ಛಡ್ಡಾ'ದ ಶೂಟಿಂಗ್ ಮುಗಿಸುವ ನಿರೀಕ್ಷೆಯಲ್ಲಿದ್ದಾಳೆ, ಆಸ್ಕರ್ ಪ್ರಶಸ್ತಿ ಪಡೆದ ಆಂಗ್ಲ ಚಿತ್ರ 'ಫಾರೆಸ್ಟ್ ಗಂಪ್ಷ' ಬಾಲಿವುಡ್ ಸ್ವರೂಪದ ಈ ಚಿತ್ರಕ್ಕೆ ಕರೀನಾ ಸಾಕಷ್ಟು ಶ್ರಮವಹಿಸಿ ದುಡಿದಿದ್ದಾರಂತೆ. ಈಗ ಗರ್ಭಿಣಿಯಾಗಿರುವುದರಿಂದ ತನ್ನ ಪಾತ್ರವನ್ನು ಶೀಘ್ರ ಮುಗಿಸಲು ಆಕೆ ನಿರ್ಮಾಪಕ ಅಮೀರ್ ಖಾನ್‌ನನ್ನು ಕೋರಿದ್ದಾಳಂತೆ.

ಈ ಮಧ್ಯೆ ಆಕೆ ನಟಿಸಲು ಒಪ್ಪಿರುವ 'ತಖ್ತ್' ಚಿತ್ರ ಕೂಡಾ 2021ರಲ್ಲಿ ಬಿಡುಗಡೆ ಆಗಬೇಕಿದೆ. ಮೊಘಲ್ ದೊರೆಗಳಾದ ಔರಂಗಜೇಬ್ ಮತ್ತು ದಾರಾ ಶಿಖೊ ನಡುವಣ ಸಂಘರ್ಷದ ಕಥೆ ಹೊಂದಿರುವ ಈ ಸಿನಿಮಾದಲ್ಲಿ ಕರೀನಾಳ ಜಹಾನಾರಾ ಬೇಗಂ ಪಾತ್ರಕ್ಕೆ ನಿರ್ದೇಶಕ ಕರಣ್ ಜೋಹರ್ ತುಂಬಾ ಪ್ರಾಮುಖ್ಯತೆ ನೀಡಿದ್ದಾರಂತೆ. ಈ ಚಿತ್ರ ಆಕೆಯ ವೃತ್ತಿ ಜೀವನದಲ್ಲಿ ಒಂದು ಮೈಲಿಗಲ್ಲಾಗಲಿದೆ ಎನ್ನುವುದು ಅಭಿಮಾನಿಗಳ ನಿರೀಕ್ಷೆ. ಆದರೆ ಗರ್ಭಿಣಿಯಾಗಿರುವ ಕರೀನಾ ಈ ಚಿತ್ರದ ಶೂಟಿಂಗನ್ನು ಹೇಗೆ ನಿರ್ವಹಿಸುತ್ತಾಳೆ ಎನ್ನುವ ಪ್ರಶ್ನೆ ಎದ್ದಿದೆ. ಕರಣ್ ಜೋಹರ್ ಮಾತ್ರ ಈ ಬಗ್ಗೆ ಅಷ್ಟೊಂದು ಚಿಂತೆ ಮಾಡಿಕೊಂಡಿಲ್ಲ. ಕೊರೊನಾ ಹಾವಳಿ ಕಡಿಮೆಯಾದ ಬಳಿಕ ಶೂಟಿಂಗ್ ಮುಂದುವರಿಸಲಿರುವ ಕರಣ್ ಜೋಹರ್, 2021ರ ಕ್ರಿಸ್ಮಸ್ ವೇಳೆಗೆ ಚಿತ್ರ ಬಿಡುಗಡೆ ಮಾಡಬಹುದು ಎನ್ನುವ ಸುದ್ದಿ ಹಬ್ಬಿದೆ. ಈ ಮಧ್ಯೆ ಕರೀನಾಳ ಫ್ಯಾಷನ್ ಉಡುಪುಗಳ ಪ್ರದರ್ಶನ ಮಾತ್ರ ಜೋರಾಗಿ ನಡೆದಿದೆ.

# ದಿಶಾ ಪಟಾನಿ ಫ್ಯಾನ್ಸ್

ಬಾಲಿವುಡ್‌ನಲ್ಲಿ ತನ್ನ ಜಿಮ್ ಕಸರತ್ತುಗಳಿಂದ ಸದಾ ಗಮನ ಸೆಳೆಯುತ್ತಿರುವ ಸುಂದರಿ ದಿಶಾ ಪಟಾನಿ. ಈಗ ಆಕೆಯ ಇನ್‌ಸ್ಟಾಗ್ರಾಮ್ ಹಿಂಬಾಲಕರ ಸಂಖ್ಯೆ 4 ಕೋಟಿ ದಾಟಿದೆಯಂತೆ! ಇಷ್ಟೊಂದು ವೇಗವಾಗಿ ಜಾಲತಾಣದಲ್ಲಿ ತನ್ನನ್ನು ಬೆನ್ನತ್ತಿರುವ ಅಭಿಮಾನಿಗಳ ಸಂಖ್ಯೆ ಏರುತ್ತಿರುವುದಕ್ಕೆ ಆಕೆ ಕೃತಜ್ಞತೆ ಸಲ್ಲಿಸಿದ್ದಾಳೆ. ಕೊರೊನಾ ಕಾರಣದಿಂದ ಶೂಟಿಂಗ್ ಕ್ಯಾನ್ಸಲ್ ಆದ ಆರು ತಿಂಗಳಲ್ಲೂ ಆಕೆಯ ಜಾಲತಾಣದ ಚಟುವಟಿಕೆಗಳು ನಿಂತಿಲ್ಲ. ಪ್ರತಿದಿನವೂ ದಿಶಾಳ ಜಿಮ್ ಕಸರತ್ತು, ನಾಯಿಯ ಜೊತೆಗಿನ ಆಟ, ಮೇಕಪ್, ಹೊಸ ಫ್ಯಾಷನ್ ಉಡುಪು ಮತ್ತು ತೊಡುಗೆಗಳ ಪ್ರದರ್ಶನ ಹೀಗೆ ಒಂದಿಲ್ಲೊಂದು ವಿಡಿಯೊಗಳು ಅಪ್‌ಡೇಟ್ ಆಗುತ್ತಲೇ ಇವೆ.

'ಎಂ.ಎಸ್. ಧೋನಿ' ಸಿನಿಮಾದ ಮೂಲಕ ಬೆಳ್ಳಿತೆರೆಗೆ ಬಂದ ದಿಶಾ, ಅತ್ಯುತ್ತಮ ಅವಕಾಶಗಳನ್ನು ಪಡೆಯುತ್ತಿದ್ದಾಳೆ. ತೀರಾ ಇತ್ತೀಚೆಗೆ ಬಂದ 'ಮಲಂಗ್' ಕೂಡಾ ಆಕೆಗೆ ಜನಪ್ರಿಯತೆ ತಂದುಕೊಟ್ಟಿದೆ. ಅರ್ಧ ಮುಗಿದಿರುವ 'ರಾಧೇ' ಸಿನಿಮಾದ ಶೂಟಿಂಗ್ ಈಗ ಕೊರೊನೋತ್ತರ ಕಾಲದಲ್ಲಿ ಮುಂದುವರಿಯುವುದನ್ನು ದಿಶಾ ಕಾಯುತ್ತಿದ್ದಾಳೆ. ಅದರ ಬೆನ್ನಲ್ಲೇ 'ಮಲಂಗ್' ನಿರ್ದೇಶಕ ಮೋಹಿತ್ ಸೂರಿ ನಿರ್ದೇಶಿಸಲಿರುವ 'ಏಕ್ ವಿಲ್ಲನ್ 2' ಚಿತ್ರದ ಶೂಟಿಂಗ್‌ಗೂ ಆಕೆ ಸಿದ್ಧತೆ ನಡೆಸುತ್ತಿದ್ದಾಳೆ.

■ ಬಿಂದು

